2006–07

ತೆಗೆದುಕೊಂಡ ಕಾಮಗಾರಿಗಳ ವಿವರ	ಮೀಸಲಿರಿಸಿದ ಮೊತ್ತ (ರೂ ಲಕ್ಷಗಳಲ್ಲಿ)	ಪ್ರಗತಿ ಮೊತ್ತ (ರೂ ಲಕ್ಷಗಳಲ್ಲಿ)
ರಸ್ತೆ ಅಭಿವೃದ್ಧಿ ಚರಂಡಿ ವ್ಯವಸ್ಥೆ	9 155 9 62	0 96 –
ನೀರು ಸರಬರಾಜು	9 75	2 93

ಇ) ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

532(557) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳ ಮೂಲಕ ವಿತರಿಸಲಾದ ಮನೆಗಳು ಮತ್ತು ನಿಗಧಿಪಡಿಸಿರುವ ಮನೆಗಳ ಸಂಖ್ಯೆ ಎಷ್ಟು,

ಆ) ಅವುಗಳಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಮನೆಗಳ ಸಂಖ್ಯೆ ಎಷ್ಟು, ಈ ಕುರಿತು ಮಂಜೂರಾದ ಮತ್ತು ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು,

ಇ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ವಸತಿ ಹೀನರು ಎಂದು ಗುರುತಿಸಲಾದ ಕುಟುಂಬಗಳ ಸಂಖ್ಯೆ ಎಷ್ಟು, ಅವರುಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವಲ್ಲಿ ಸರ್ಕಾರದ ಸಕಾಲಿಕ ಕ್ರಮಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ರಾಜ್ಯದಲ್ಲಿ 2005–06 ಮತ್ತು 2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳ ಮೂಲಕ ವಿತರಿಸಲಾದ ಮನೆಗಳ ವಿವರ ಈ ಕೆಳಗಿನಂತೆ ನೀಡಲಾಗಿದೆ

ಯೋಜನೆ	ಶ್ರೇಣಿ	ಗುರಿ ನಿಗದಿಪಡಿಸಿದ ಮನೆಗಳು
ಗ್ರಾಮೀಣ ಆಶ್ರಯ	2005–06	226080
	2006–07	340560
	ಒಟ್ಟು	**566640**
ಗ್ರಾಮೀಣ ಅಂಬೇಡ್ಕರ್	2005–06	24040
	2006–07	
	ಒಟ್ಟು	**24040**
ನಗರ ಆಶ್ರಯ	2005–06	50000
	2006–07	
	ಒಟ್ಟು	**50000**
ಇಂದಿರಾ ಆವಾಸ್ ಯೋಜನೆ	2005–06	50136
	2006–07	53299
	ಒಟ್ಟು	**103435**

2005–06ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ 15465 ಮನೆಗಳನ್ನು ವಿತರಿಸಲಾಗಿದೆ ಸಮಗ್ರ ವಸತಿ ಹಾಗೂ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ (IHSDP) ಯಡಿ 2006–07ನೇ ಸಾಲಿನಲ್ಲಿ 32766 ಮನೆಗಳನ್ನು ನಿರ್ಮಿಸಲು ಯೋಜನೆ ಸಿದ್ಧಪಡಿಸಲಾಗಿದೆ

ಆ) ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಮನೆಗಳ ಸಂಖ್ಯೆ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ

ಕೇಂದ್ರ ಸರ್ಕಾರದಿಂದ IHSDP ಯೋಜನೆಗೆ ಮಂಜೂರಾತಿ ದೊರೆತು ಹಾಗೂ ಹಣ ಬಿಡುಗಡೆಯಾದ ನಂತರ ಯೋಜನೆಯನ್ನು ಜಾರಿಗೊಳಿಸಲಾಗುವ ಕಾರಣ ಉದ್ಭವಿಸುವುದಿಲ್ಲ

ಇ) ಸ್ಥಳೀಯ ಸಂಸ್ಥೆಗಳ ಮುಖಾಂತರ ಜೂನ್ 2003ರಲ್ಲಿ ವಸತಿ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು ಈ ಸಮೀಕ್ಷೆಯ ಪ್ರಕಾರ ಬೆಳ್ತಂಗಡಿ ತಾಲ್ಲೂಕಿನಲ್ಲಿ ಈ ಕೆಳಗಿನಂತೆ ವಸತಿ ರಹಿತ ನಿವೇಶನ ರಹಿತ ಕುಟುಂಬಗಳ ಸಂಖ್ಯೆ ಇರುತ್ತದೆ

ಪ್ರದೇಶ	ವಸತಿ ರಹಿತ	ನಿವೇಶನ ರಹಿತ	ಒಟ್ಟು
ಗ್ರಾಮೀಣ ಪ್ರದೇಶ	3204	3643	6847
ನಗರ ಪ್ರದೇಶ *	10	104	114
ಒಟ್ಟು	**3205**	**3695**	**6900**

ಸಮೀಕ್ಷೆಯ ನಂತರ 2003–04 ರಿಂದ ಇಲ್ಲಿಯವರೆಗೆ ವಿವಿಧ ವಸತಿ ಯೋಜನೆಗಳಲ್ಲಿ ಒಟ್ಟು 4887 ಮನೆಗಳ ಗುರಿ ನೀಡಲಾಗಿರುತ್ತದೆ

* ಪಟ್ಟಣ ಪಂಚಾಯತ್ ಬೆಳ್ತಂಗಡಿಯವರು ಇತ್ತೀಚಿನ ವರದಿಯನ್ನು ನೀಡಿರುತ್ತಾರೆ

ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಯಾವುದೇ ಕೊಳಚೆ ಪ್ರದೇಶವನ್ನು ಮಂಡಳಿ ವತಿಯಿಂದ ಗುರುತಿಸಿರುವುದಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ–'ಅ'

ರಾಜ್ಯದಲ್ಲಿ 2005–06ನೇ ಸಾಲಿನ ಮನೆಗಳ ಪ್ರಗತಿ ವಿವರ 31.12.2006

ಯೋಜನೆ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು				ಪ್ರಾರಂಭವಾದ ಮನೆಗಳು	ಒಟ್ಟು ಬೇಕಾಗಿರುವ ಅನುದಾನ (ರೂ ಲಕ್ಷಗಳಲ್ಲಿ)	ಆಯವ್ಯಯದಲ್ಲಿ ಈವರೆಗು ಒದಗಿಸಲಾದ ಅನುದಾನ (ರೂ ಲಕ್ಷಗಳಲ್ಲಿ)	ಬಿಡುಗಡೆ ಆದ ಹಣ (ರೂ ಲಕ್ಷಗಳಲ್ಲಿ)
		ಪಾಯ	ಗೋಡೆ	ಛಾವಣಿ	ಒಟ್ಟು				
ಗ್ರಾಮೀಣ ಆಶ್ರಯ	19242	64806	28658	17552	111016	95822	45216 00	24280 78	20340 40
ಗ್ರಾಮೀಣ ಅಂಬೇಡ್ಕರ್	924	6459	2130	640	9229	13887	4808 00	5000 00	1323 60
ಇಂದಿರಾ ಆವಾಸ್	30510	6805	6248	6573	19986	0	12543 00	12534 00	12896 13
ನಗರ ಆಶ್ರಯ		ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿದೆ				50000	0 00	0 00	50 00
ಒಟ್ಟು	**50676**	**78070**	**37036**	**24765**	**140231**	**159709**	**62558 00**	**41814 78**	**34610 13**

ರಾಜ್ಯದಲ್ಲಿ 2006–07ನೇ ಸಾಲಿನ ಮನೆಗಳ ಪ್ರಗತಿ ವಿವರ

ಯೋಜನೆ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು				ಪ್ರಾರಂಭವಾದ ಮನೆಗಳು	ಒಟ್ಟು ಬೇಕಾಗಿರುವ ಅನುದಾನ (ರೂ ಲಕ್ಷಗಳಲ್ಲಿ)	ಆಯವ್ಯಯದಲ್ಲಿ ಈವರೆಗು ಒದಗಿಸಲಾದ ಅನುದಾನ (ರೂ ಲಕ್ಷಗಳಲ್ಲಿ)	ಬಿಡುಗಡೆ ಆದ ಹಣ (ರೂ ಲಕ್ಷಗಳಲ್ಲಿ)
		ಪಾಯ	ಗೋಡೆ	ಛಾವಣಿ	ಒಟ್ಟು				
ಗ್ರಾಮೀಣ ಆಶ್ರಯ	2006–07ನೇ ಸಾಲಿನ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿದೆ								
ಇಂದಿರಾ ಆವಾಸ್	1867	9993	2006	1142	13141	38291	13324 88	13324 88	8582 710
ಒಟ್ಟು	**1867**	**9993**	**2006**	**1142**	**13141**	**38291**	**13324 88**	**13324 88**	**8582 710**